

# ಒಣಗಿದ ಮರದಲ್ಲಿ ಗಿಳಿಗಳ ಕಂಡ ಕವಿ

ಕನ್ನಡ ಕಾವ್ಯದ ಚೆಲುವನ್ನು ವಿಸ್ತರಿಸಿದ ಕವಿ ಎಚ್.ಎಸ್. ವೆಂಕಟೇಶಮೂರ್ತಿ ಅವರಿಗೀಗ ಕಲಬುರ್ಗಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ.

■ ಸಂದೀಪ ನಾಯಕ
ಚಿತ್ರ: ರಂಜು ಪಿ.

ಕನ್ನಡ ಕಾವ್ಯಕ್ಕೆ ಹೊಸ ನುಡಿಗಟ್ಟು, ರೂಪಕಗಳನ್ನು ಕೊಟ್ಟ ಕವಿ ಎಚ್.ಎಸ್. ವೆಂಕಟೇಶಮೂರ್ತಿ. ಕನ್ನಡಿಗರಿಗೆ ಓದಬಲ್ಲ ಮತ್ತು ಗುನುಗಿಕೊಳ್ಳಬಹುದಾದ ಕವಿತೆಗಳನ್ನು ಕೂಡ ಕೊಟ್ಟ ಕವಿ ಅವರು. ಕನ್ನಡ ಭಾಷೆಯ ಸಂಗೀತ ಮತ್ತು ನಾದಮಯತೆ ಎಚ್ಚೆಸ್ವಿ ಅವರ ಕಾವ್ಯದಲ್ಲಿ ಇರುವುದರಿಂದಲೇ ಅವರ ಕವಿತೆಗಳು ಜನಪ್ರಿಯ ಮಾತ್ರವಲ್ಲ ಓದುಗರ ಗಂಭೀರ ಚಿಂತನೆಗೂ ಅರ್ಹವಾಗಿವೆ.

ನವೋದಯದ ರಮ್ಯತೆ ಮತ್ತು ನವ್ಯದ ಪ್ರತಿಮಾತ್ಮಕತೆ ಅವರ ಕಾವ್ಯದ ಪ್ರಮುಖ ಲಕ್ಷಣ. ಕನ್ನಡ ಕಾವ್ಯದ ಮುಖ್ಯ ಅಂಶವಾಗಿರುವ ಕಥನವನ್ನು ಸರಿಯಾದ ರೀತಿಯಲ್ಲಿ ಮುಂದುವರಿಸಿದವರು ಎಚ್ಚೆಸ್ವಿ. ಅವರ ಅನೇಕ ಕವಿತೆಗಳು ಕಥನ ಪ್ರಧಾನವಾದವು. ಕಥನದ ವಸ್ತುಗಳಿಗೆ ಅವರು ಮೊರೆಹೋಗುವುದು ಪುರಾಣ ಮತ್ತು ನಮ್ಮ ಮಹಾಕಾವ್ಯಗಳಿಗೆ. ಜೊತೆಗೆ ಅವು ವರ್ತಮಾನದ ನೆಲದಲ್ಲಿ ಕಾಲೂರಿ ಸಮಕಾಲೀನವಾಗಿಯೂ ಇರುತ್ತವೆ. ಆಧುನಿಕ ಕಾವ್ಯದಲ್ಲಿ ಕಥನವನ್ನು ಅವರ ಹಾಗೆ ಬಳಸಿಕೊಂಡವರು ಅಪರೂಪ. ಪ್ರಮಾಣ ಮತ್ತು ಗುಣದಲ್ಲಿ ಎಚ್ಚೆಸ್ವಿ ಅವರ ಕಾವ್ಯ ವಿಸ್ತಾರವಾಗಿದೆ; ಕನ್ನಡ ಕಾವ್ಯದಲ್ಲಿ ತನ್ನದೇ ಎತ್ತರವನ್ನು, ಜಾಗವನ್ನು ಪಡೆದಿದೆ.

ಈ ಎಲ್ಲ ಅಂಶಗಳ ಹಿಂದೆ ಇರುವುದು ಅವರ ಪ್ರಯೋಗಶೀಲತೆ. ಕವಿಯೊಬ್ಬನ ಮೊದಲ ಅರ್ಹತೆಯಾದ ಈ ಪ್ರಯೋಶೀಲತೆ ಅವರ ಕಾವ್ಯದಲ್ಲಿ ಅರ್ಧ ಶತಮಾನದಿಂದ ಕೆಲಸ ಮಾಡುತ್ತ ಬಂದಿದೆ. ಅವರು ಕಾವ್ಯದ ಛಂದಸ್ಸು, ಲಯದಲ್ಲಿ ಹೊಸ ಪ್ರಯೋಗಗಳನ್ನು ಮಾಡುತ್ತಾ ಬಂದಿದ್ದಾರೆ. ಖಂಡಕಾವ್ಯ, ಷಟ್ಪದಿ, ಸಾನೆಟ್ – ಹೀಗೆ ಅವರು ಸದಾ ಪ್ರಯೋಗಶೀಲರು. ಆಧುನಿಕ ಕಾಲಕ್ಕೆ ಬೇಕಾದ ಹಾಗೆ ಅವನ್ನು ಮುರಿದು ಕಟ್ಟುವ ಕೆಲಸ ಅವರ ಕಾವ್ಯ ಸದಾ ನಡೆಯುತ್ತಲೇ ಇದೆ. ಆಧುನಿಕ ಕವಿಗಳಲ್ಲಿ ಎಚ್ಚೆಸ್ವಿಯವರಷ್ಟು ಪ್ರಯೋಗಗಳಲ್ಲಿ ನಿರತರಾದವರು ಕಡಿಮೆ. ಅವರ ಪ್ರಯೋಗಗಳನ್ನು 'ಸಿಂದಬಾದನ ಆತ್ಮಕಥೆ', 'ಕ್ರಿಯಾಪರ್ವ', 'ಒಣಗಿದ ಮರದ ಗಿಳಿಗಳು', 'ಎಷ್ಟೊಂದು ಮುಗಿಲು', 'ಅಮೆರಿಕಾದಲ್ಲಿ ಬಿಲ್ಲುಹಬ್ಬ', 'ವಿಮುಕ್ತಿ', 'ಹರಿಗೋಲು', 'ವಿಸರ್ಗ', 'ಭೂಮಿಯೂ ಒಂದು ಆಕಾಶ'ವೂ ಸೇರಿದಂತೆ ಅವರ ಅನೇಕ ಕವಿತಾ ಸಂಗ್ರಹಗಳಲ್ಲಿ ನೋಡಬಹುದು. ಈ ಎಲ್ಲ ಗುಣಗಳಿಂದಾಗಿ ಅವರ ಕವಿತೆಗಳು ತಮ್ಮ ಆಕಾರ, ಬಂಧದಲ್ಲಿ ಸುಂದರವಾಗಿ ವಿನ್ಯಾಸಗೊಳಿಸಿ ಹೆಣೆದ ಕಸೂತಿ ಬಟ್ಟೆಯಂತೆ ಇರುತ್ತವೆ.

ವೆಂಕಟೇಶಮೂರ್ತಿಯವರ ಪ್ರಯೋಗಶೀಲತೆ ಕಾವ್ಯಕ್ಕಷ್ಟೇ ನಿಲ್ಲುವುದಿಲ್ಲ. ಅವರಷ್ಟು ಸಾಹಿತ್ಯದ ಪ್ರಕಾರಗಳಲ್ಲಿ ಬರೆದವರು ಬಹಳಿಲ್ಲ. ಕತೆ, ಕಾದಂಬರಿ, ನಾಟಕ, ವಿಮರ್ಶೆ, ಅಂಕಣ, ಅನುವಾದ, ಮಕ್ಕಳ ಸಾಹಿತ್ಯಗಳಲ್ಲಿ ಎಚ್ಚೆಸ್ವಿ ತಮ್ಮದೇ ಛಾಪು ಒತ್ತಿದ್ದಾರೆ. ಆದರೆ, ಅವರ ಮೂಲ ನಿಷ್ಠೆ ಮಾತ್ರ ಕಾವ್ಯಕ್ಕೇ. ಅವರು 'ಮಯೂರ' ಮಾಸಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ, 'ಈ ವಿಹಾರ ನಂತರ ಮನೆಗೆ ಹೋಗಿಬಂದ ಹಾಗೆ. ರುಚಿ ಬೇರೆ ಬೇಕೆನಿಸಿದಾಗ ಅತ್ತಿತ್ತ ಹೋಗಿಬಂದರೂ ನಮ್ಮ ಮನೆ ನಮಗೆ ಶಾಶ್ವತ. ನಿತ್ಯ ವಾಸ, ನಿತ್ಯ ಅನುಷ್ಠಾನ ಏನಿದ್ದರೂ ನಮ್ಮ ಮನೆಯಲ್ಲೇ. ನಾವು ಬೇರೆಡೆ ಹೋದಾಗ ಅಥವಾ ನಮ್ಮ ಮನೆಗೆ ಬೇರೆಯವರು ಒಂದಿಷ್ಟು ದಿನ ಬಂದಾಗ ನಮಗೆ ಹೊಸ ಬಾಗಿಲುಗಳು ತೆರೆದುಕೊಳ್ಳುತ್ತವೆ. ಬದುಕು–ಬರವಣಿಗೆಗೆ ಹೊಸ ಉತ್ಸಾಹ ದೊರೆಯುತ್ತದೆ. ಪುನಃ ಮನೆಗೆ ಬಂದಾಗ ನಮ್ಮ ಪತ್ನಿ ನಮಗೆ ಮತ್ತಷ್ಟು ಚೆಲುವಾಗಿ ಕಾಣಿಸುತ್ತಾಳೆ. ನಮ್ಮ ಕವಿತೆಯ ಬಗ್ಗೆ ಗೌರವ ಮತ್ತಷ್ಟು ಹೆಚ್ಚಾಗುತ್ತದೆ. ಆಗಾಗ ಹೊರಗಿನ ಜಗತ್ತನ್ನು ನೋಡಿಬರುವುದು ಕವಿಗೆ ಅಗತ್ಯ. ಕಥೆ, ಕಾದಂಬರಿ, ನಾಟಕ – ಯಾವುದು ಬರೆದರೂ ಮತ್ತೆ ಕಾವ್ಯಕ್ಕೇ ಬರುತ್ತೇನೆ' ಎಂದಿದ್ದಾರೆ.

ಕಾವ್ಯ ಮಾತ್ರವಲ್ಲ, ಕಾಳಿದಾಸನ ಕಾವ್ಯ 'ಋತು ಸಂಹಾರ'ದ ಅನುವಾದ 'ಋತು ವಿಲಾಸ', ಕನ್ನಡ ಕವಿಗಳಾದ ಪಂಪ, ಜನ್ನ, ಕುಮಾರವ್ಯಾಸರ ಕಾವ್ಯದ ತಿಳಿಗನ್ನಡ ಅವತರಣಿಕೆಗಳು ಅವರು ಕನ್ನಡಕ್ಕೆ ಕೊಟ್ಟ ಮುಖ್ಯ ಕೊಡುಗೆಗಳಾಗಿವೆ. ಇದೆಲ್ಲ ಕೆಲಸಗಳ ಹಿಂದಿರುವ ಉದ್ದೇಶ, ಕನ್ನಡ ಓದುಗರಲ್ಲಿ ಕಾವ್ಯದ ಕುರಿತ ಶುಚಿ, ರುಚಿಯನ್ನು ಬೆಳೆಸಬೇಕೆನ್ನುವುದು.

ಕೇವಲ ಗಂಭೀರ ಓದಿಗೆ ಸಲ್ಲುವವರಲ್ಲ ಎಚ್ಚೆಸ್ವಿ. ಅವರು ನಮ್ಮ ಕನ್ನಡದ ಅನೇಕ ಲೇಖಕರು ಬರೆಯಲು ಹಿಂಜರಿಯುವ ಮಕ್ಕಳಿಗಾಗಿ ಉತ್ತಮ ಪದ್ಯಗಳನ್ನು ಬರೆದಿದ್ದಾರೆ. ಮಕ್ಕಳೂ ಗುನುಗಿಕೊಳ್ಳಬಹುದಾದ ಅವು ಅವರ ಕಲ್ಪನೆಯನ್ನು ವಿಸ್ತರಿಸುವಂತಿವೆ. ಎಳೆಯರಿಂದ ಹಿರಿಯರವರೆಗೆ ತಮ್ಮ ಕವಿತೆಗಳಿಂದ ಮುಟ್ಟಿದ ಕೆಲವೇ ಕನ್ನಡ ಕವಿಗಳಲ್ಲಿ ಎಚ್ಚೆಸ್ವಿ ಮುಖ್ಯರು. ಸದ್ಯದಲ್ಲಿ ಗುಣ ಮತ್ತು ಪ್ರಮಾಣದಲ್ಲಿ ಅವರ ಸಾಧನೆಯನ್ನು ಸರಿಗಟ್ಟಬಲ್ಲವರು ಹೆಚ್ಚಿಲ್ಲ. ■